## ಕೋವಿಡ್: 48 ಗಂಟೆ ಕಚೇರಿಗೆ ಬೀಗ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಉದ್ಯೋಗಿಯಲ್ಲಿ ಕೊರೊನಾ ಸೋಂಕು ಪತ್ತೆಯಾದಲ್ಲಿ 48 ಗಂಟೆಗಳ ಕಾಲ ಕಚೇರಿಯನ್ನು ಬಂದ್ ಮಾಡಿ, ಸೋಂಕು ನಿವಾರಕದಿಂದ ಸ್ವಚ್ಛಗೊಳಿಸಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ಕಚೇರಿಗಳಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಯನ್ನು ಆರೋಗ್ಯ ಇಲಾಖೆ ಬಿಡುಗಡೆ ಮಾಡಿದ್ದು, ಅಗತ್ಯ ಮುಂಜಾಗರೂಕ ಕ್ರಮಗಳನ್ನು ಅನುಸರಿಸುವಂತೆ ಸೂಚಿಸಿದೆ. ಸೋಂಕಿತ ವ್ಯಕ್ತಿ ಸೀಮಿತ ಸ್ಥಳಗಳಲ್ಲಿ ಮಾತ್ರ ಸಂಚರಿಸಿದಲ್ಲಿ ಇಡೀ ಕಚೇರಿಯನ್ನು ಬಂದ್ ಮಾಡಬೇಕಾದ ಅಗತ್ಯವಿಲ್ಲ. ಸೋಂಕು ನಿವಾರಕದಿಂದ ಸಂಪೂರ್ಣ ಕಚೇರಿಯನ್ನು ಸ್ವಚ್ಛಗೊಳಿಸಬೇಕಾಗುತ್ತದೆ. ವ್ಯಕ್ತಿ ವಿವಿಧೆಡೆ ಓಡಾಟ ನಡೆಸಿದ್ದಲ್ಲಿ ಅಥವಾ ಹಲವು ಮಂದಿಯ ಸಂಪರ್ಕಕ್ಕೆ ಬಂದಿದ್ದಲ್ಲಿ ಸಂಪೂರ್ಣ ಕಚೇರಿಯನ್ನು ಬಂದ್ ಮಾಡಬೇಕಾಗುತ್ತದೆ. ಈ ವೇಳೆ ಉದ್ಯೋಗಿಗಳಿಗೆ ಮನೆಯಿಂದಲೇ ಕೆಲಸ ಮಾಡಲು ಸೂಚಿಸಬೇಕು. ಗರ್ಭಿಣಿಯರು ಹಾಗೂ ವಯಸ್ಸಾದ ಉದ್ಯೋಗಿಗಳ ಮೇಲೆ ಹೆಚ್ಚಿನ ಕಾಳಜಿ ತೆಗೆದುಕೊಳ್ಳಬೇಕು ಎಂದು ತಿಳಿಸಲಾಗಿದೆ.

ಸೋಂಕು ಲಕ್ಷಣ ಇಲ್ಲದ ಉದ್ಯೋಗಿಗಳು ಹಾಗೂ ಸಂದರ್ಶಕರಿಗೆ ಮಾತ್ರ ಕಚೇರಿಗೆ ಪ್ರವೇಶಕ್ಕೆ ಅವಕಾಶ ನೀಡಬೇಕು ಎಂದು ಇಲಾಖೆ ಸ್ಪಷ್ಟಪಡಿಸಿದೆ.

### ಶಿಕ್ಷಕರ– ಪೋಷಕರ ಸಭೆ, ತೀವ್ರ ಚರ್ಚೆ, ತಿಳಿಯಾಗದ ಕೊರೊನಾ ಸೋಂಕು ಆತಂಕ

# ಶಾಲಾರಂಭ: ಪೋಷಕರ ಗೊಂದಲ

ಪ್ರಜಾವಾಣಿ ವಾರ್ತೆ

**ಹೊಸಕೋಟೆ:** ಮಕ್ಕಳನ್ನು ಶಾಲೆಗೆ ಕಳುಹಿಸುವ ಬಗ್ಗೆ ಪೋಷಕರಲ್ಲಿ ಗೊಂದಲದ ವಾತಾವರಣವಿದೆ. ಶಾಲೆಯ ಪ್ರಾರಂಭದ ಬಗ್ಗೆ ಅವರಲ್ಲಿ ಆತಂಕದ ವಾತಾವರಣ ಕಾಣುತ್ತಿದೆ.

– ರಾಜ್ಯ ಸರ್ಕಾರದ ಆದೇಶದ ಮೇರೆಗೆ ಎಲ್ಲಾ ಶಾಲೆಗಳಲ್ಲಿ ಪೋಷಕರ ಸಭೆ ನಡೆಸಲು ಸೂಚಿಸಿದ ಹಿನ್ನಲೆಯಲ್ಲಿ ಬುಧವಾರ ನಗರದ ಕರ್ನಾಟಕ ಸರ್ಕಾರಿ ಕನ್ನಡ ಮಾದರಿ ಶಾಲೆಯಲ್ಲಿ ಕರೆದಿದ್ದ ಪೋಷಕರ ಸಭೆಯಲ್ಲಿ ಕಂಡುಬಂದ ದೃಶ್ಯವಿದು.

ಕ್ಷೇತ್ರ ಶಿಕ್ಷಣ ಸಮನ್ವಯಾಧಿಕಾರಿ ಲಲಿತಮ್ಮ ಮಾತನಾಡಿ,

**ಮುಖ್ಯಾಂಶಗಳು**
- ಒಮ್ಮತಕ್ಕೆ ಬಾರದ ಪೋಷಕರು
- ಪತಿ ಪತ್ನಿಯಲ್ಲೇ ಭಿನ್ನಾಭಿಪ್ರಾಯ
- ಇಲಾಖೆಗೆ ವರದಿ ರವಾನೆ

'ಮುಂದಿನ ದಿನಗಳಲ್ಲಿ ಸರ್ಕಾರವು ಶಾಲೆಯನ್ನು ಪ್ರಾರಂಭಿಸಲು ವಿವಿಧ ಯೋಚನೆ ಮಾಡುತ್ತಿದ್ದು ಅದರಲ್ಲಿ ನಿತ್ಯ ಅಂತರ ಕಾಪಾಡಿಕೊಂಡು ಶಾಲೆ ನಡೆಸುವುದು, ಶಾಲೆಯನ್ನು ದಿನದಲ್ಲಿ ಎರಡು ಪಾಳಿಯಲ್ಲಿ ಬೆಳಿಗ್ಗೆ ಒಂದರಿಂದ ಐದನೆ ತರಗತಿಯವರೆಗೆ ಮತ್ತು ಮಧ್ಯಾಹ್ನ ಆರನೇ ತರಗತಿಯಿಂದ ಎಂಟನೇ ತರಗತಿಯವರೆಗೆ ನಡೆಸುವುದು ಮತ್ತು ದಿನಬಿಟ್ಟು ದಿನ ಶಾಲೆ ನಡೆಸುವುದು ಹಾಗೆಯೇ ಬಿಸಿಊಟ ಶಾಲೆಯಲ್ಲಿ ಮಾಡಿಸುವುದು ಅಥವಾ ಮನೆಗಳಿಂದಲೇ ಮಕ್ಕಳು ಊಟ ತರುವುದು ಹೇಗೆ ಎಂಬ ಅನೇಕ ಗೊಂದಲಗಳಿದ್ದು ಇದರ ಬಗ್ಗೆ ಪೋಷಕರು ತಮ್ಮ ಅಭಿಪ್ರಾಯ ತಿಳಿಸಬೇಕು' ಎಂದರು.


ಹೊಸಕೋಟೆಯ ಕರ್ನಾಟಕ ಮಾದರಿ ಕನ್ನಡ ಶಾಲೆಯಲ್ಲಿ ಪೋಷಕರ ಸಭೆಯಲ್ಲಿ ಭಾಗವಹಿಸಿದ್ದ ಪೋಷಕರು.


ಹೊಸಕೋಟೆಯ ಕರ್ನಾಟಕ ಮಾದರಿ ಕನ್ನಡ ಶಾಲೆಯಲ್ಲಿ ಪೋಷಕರ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಕ್ಷೇತ್ರ ಶಿಕ್ಷಣ ಸಮನ್ವಯಾಧಿಕಾರಿ ಲಲಿತಮ್ಮ ಹಾಗೂ ಮುಖ್ಯ ಶಿಕ್ಷಕ ರಮೇಶ್

ಸಭೆಯಲ್ಲಿ ಪೋಷಕರು ಮಾತನಾಡಿ ಕೆಲವರು ಬರುವ ಆಗಸ್ಟ್‌ವರೆಗೆ ಶಾಲೆ ಆರಂಭಿಸಬಾರದೆಂದು ಅಭಿಪ್ರಾಯಪಟ್ಟರೆ ಕೆಲವರು ದಿನ ಬಿಟ್ಟು ದಿನ ಶಾಲೆ ನಡೆಯಲಿ ಎಂದರು.

ಪೋಷಕರಾದ ಗಾಯತ್ರಿ ಮಾತನಾಡಿ, 'ಮಕ್ಕಳು ದೂರದ ಊರುಗಳಿಂದ ಬರುತ್ತಾರೆ ಅವರು ಬರುವ ಬಿಎಂಟಿಸಿ ಬಸ್‌ಗಳಲ್ಲಿ ಯಾವುದೇ ಮುಂಜಾಗೃತಾ ಕ್ರಮಗಳಿಲ್ಲ. ಬಸ್ ನಿಲ್ದಾಣದಲ್ಲಿ ಸ್ಯಾನಿಟೈಸರ್ ವ್ಯವಸ್ಥೆಯಾಗಲಿ ಅಥವಾ ಸಾಮಾಜಿಕ ಅಂತರವನ್ನು ಕಾಪಾಡಲು ಅಧಿಕಾರಿಗಳಾಗಲಿ ಬಸ್ ನಿಲ್ದಾಣದಲ್ಲಿ ಇರುವುದಿಲ್ಲ. ಅಂತಹ ಸಂದರ್ಭದಲ್ಲಿ ನಾವು ಯಾವ ನಂಬಿಕೆಯಿಂದ ಮಕ್ಕಳನ್ನು ಶಾಲೆಗೆ ಕಳುಹಿಸಬೇಕು' ಎಂದು ಪ್ರಶ್ನಿಸಿದರು.

ಪೋಷಕರಾದ ಗಿರೀಶ್ ಮಾತನಾಡಿ, 'ಸರ್ಕಾರಿ ಶಾಲೆಗೆ ಮಕ್ಕಳನ್ನು ಕಳುಹಿಸುವ ಪೋಷಕರ ಬಳಿ ಸ್ಮಾರ್ಟ್ ಫೋನ್ ಆಗಲಿ ಮನೆಯಲ್ಲಿ ಇಬ್ಬರು ಮಕ್ಕಳಿದ್ದರೆ ಇಬ್ಬರಿಗೂ ಪ್ರತ್ಯೇಕ ಫೋನ್ ಕೊಡಿಸುವ ಸಾಮರ್ಥ್ಯ ಇರುವುದಿಲ್ಲವಾದ್ದರಿಂದ ಮಕ್ಕಳಿಗೆ ಪಠ್ಯಪುಸ್ತಕಗಳನ್ನು ಕೊಟ್ಟರೆ ಮಕ್ಕಳು ಮನೆಯಲ್ಲಿಯೇ ಓದುತ್ತಾರೆ ಎಂದು ಅಭಿಪ್ರಾಯಪಟ್ಟರು. ಪೋಷಕ ಪತಿ–ಪತ್ನಿಯರಲ್ಲಿಯೇ ಪ್ರತ್ಯೇಕ ಅಭಿಪ್ರಾಯ ವ್ಯಕ್ತವಾಯಿತು.

ಒಟ್ಟಿನಲ್ಲಿ ಪೋಷಕರ ಸಭೆಯಲ್ಲಿ ಯಾವುದೇ ಒಟ್ಟು ಅಭಿಪ್ರಾಯ ಬರದೇ ಗೊಂದಲದಲ್ಲಿಯೇ ಸಭೆ ಮುಕ್ತಾಯವಾಯಿತು. ಸಭೆಯಲ್ಲಿ ಯೋಗೇಶ್ ಕ್ಷೇತ್ರ ಸಂಪನ್ಮೂಲ ಅಧಿಕಾರಿ, ತ್ಯಾಗರಾಜ್, ಮುಖ್ಯಶಿಕ್ಷಕರಾದ ರಮೇಶ್ ಶಾಲೆ ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಗೌರಮ್ಮ, ಸದಸ್ಯರು ಶಿಕ್ಷಕರು ಮತ್ತು ಪೋಷಕರು ಭಾಗವಹಿಸಿದ್ದರು.

## ಸುದ್ದಿ 2 ನಿಮಿಷ

### 'ರಾಜ್ಯ ಸಭೆಗೆ ಖರ್ಗೆ ಆಯ್ಕೆ; ಪಕ್ಷದ ನಿಷ್ಠೆ ಪರಿಗಣನೆ'

**ದೇವನಹಳ್ಳಿ:** ಲೋಕಸಭೆ ಚುನಾವಣೆಯಲ್ಲಿ ಸೋತ ನಂತರ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷೆ, ಮಲ್ಲಿಕಾರ್ಜುನ ಖರ್ಗೆರವರನ್ನು ರಾಜ್ಯ ಸಭೆಗೆ ಪರಿಗಣಿಸಿರುವುದು ಪಕ್ಷ ನಿಷ್ಠೆಯಿಂದ ಎಂದು ಜಿಲ್ಲಾ ಕಾಂಗ್ರೆಸ್ ಎಸ್ಸಿ ಘಟಕ ಅಧ್ಯಕ್ಷ ಎಂ. ಲೋಕೇಶ್ ಹೇಳಿದರು.

ಇಲ್ಲಿನ ಪ್ರವಾಸಿ ಮಂದಿರದಲ್ಲಿ ಮಾತನಾಡಿದ ಅವರು, ಖರ್ಗೆ ಅವರು ತಮ್ಮ 46 ವರ್ಷಗಳ ರಾಜಕೀಯ ಜೀವನದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಯಾವುದೇ ರೀತಿಯಿಂದ ಕಪ್ಪು ಚುಕ್ಕೆ ಬಾರದ ರೀತಿಯಲ್ಲಿ ರಾಜ್ಯದಲ್ಲಿ ಅನೇಕ ಸಂದರ್ಭಗಳಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ಶ್ರಮಿಸಿದ್ದಾರೆ, ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷ ಆಡಳಿತಕ್ಕೆ ಬರಲು ರಾಜ್ಯದಿಂದ ಅತಿ ಹೆಚ್ಚುಸ್ಥಾನಗಳಿಸಿಕೊಟ್ಟ ಮುತ್ಸದ್ದಿ ರಾಜಕಾರಣಿ, ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತದ ಸರ್ಕಾರವಿದ್ದಾಗ ವಿವಿಧ ಸಂಪುಟ ದರ್ಜೆಯ ಸಚಿವರಾಗಿ ಪಾರದರ್ಶಕ ಮತ್ತು ಪ್ರಾಮಾಣಿಕತೆಯಿಂದ ಕರ್ತವ್ಯ ನಿರ್ವಹಿಸಿದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ ಎಂದು ಅವರು ಹೇಳಿದರು .



ಸಂಸದರಾಗಿ ಬಿಜೆಪಿ ಆಡಳಿತ ಪಕ್ಷದ ಹಲವಾರು ಲೋಪ-ದೋಷಗಳನ್ನು ದೇಶದ ಮುಂದೆ ಅನಾವರಣ ಮಾಡಿದ್ದರು,ಬಹುಭಾಷ ನಿಪುಣರಾಗಿ ಸಂಸತ್ತಿನ ಅಧಿವೇಶನದಲ್ಲಿ ಸರ್ಕಾರದ ವಿರುದ್ಧ ಪ್ರಶ್ನೆಗಳ ಸುರಿಮಳೆಯನ್ನೆ ಸುರಿಸುತ್ತಿದ್ದರು ಕೇಂದ್ರ ಸಚಿವರಾಗಿ ಉತ್ತಮ ಕೆಲಸ ಮಾಡಿದ್ದರು ಕಳೆದ ಬಾರಿ ನಡೆದ ಲೋಕ ಸಭಾ ಚುನಾವಣೆಯಲ್ಲಿ ವಿರೋಧ ಪಕ್ಷಗಳ ಷಡ್ಯಂತ್ರಕ್ಕೆ ಒಳಗಾಗಿ ಸೋಲುವಂತಾಯಿತು ಆದರೂ ಕಾಂಗ್ರೆಸ್ ಪಕ್ಷ ಅನುಭವಿ ರಾಜಕರಾಣಿಯನ್ನು ಮೂಲೆ ಗುಂಪು ಮಾಡದೆ ಗೌರವ ನೀಡಿರುವುದು ಹೆಮ್ಮೆಯ ಸಂಗತಿ ಎಂದು ಹೇಳಿದರು.

### ಮುಸುಕಿನ ಜೋಳ ರೈತರಿಗೆ ನೆರವು

**ದೇವನಹಳ್ಳಿ:** ಕೋವಿಡ್-19 ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ಒಳಗಾದ ಮುಸುಕಿನ ಜೋಳ ಬೆಳೆಗಾರರಿಗೆ ಆರ್ಥಿಕ ನೆರವು ನೀಡಲು ಅರ್ಜಿ ಆಹ್ವಾನಿಸಲಾಗಿದೆ.

'ಬೆಳೆ ಸಮೀಕ್ಷೆ ತಂತ್ರಾಂಶದಲ್ಲಿ ಈಗಾಗಲೇ ದಾಖಲಾಗಿರುವ ಬೆಳೆ ವಿವರಗಳ ಆಧಾರದ ಮೇರೆಗೆ ಹಾಗೂ ಬೆಳೆ ಸಮೀಕ್ಷೆ ಆಗದೇ ಇರುವ ಗ್ರಾಮಗಳ (ಹಿಂಗಾರು ಹಾಗೂ ಬೇಸಿಗೆ ಹಂಗಾಮು ಮಾತ್ರ) ರೈತರು ರೈತ ಸಂಪರ್ಕ ಕೇಂದ್ರಗಳಲ್ಲಿ 2020ರ ಜೂನ್ 24ರ ಒಳಗೆ ಅರ್ಜಿ ಸಲ್ಲಿಸಬಹುದು. ಆಧಾರ್ ಕಾರ್ಡ್ ಪ್ರತಿ, ಪಹಣಿ, ಆಧಾರ್ ಲಿಂಕ್ ಆಗಿರುವ ಬ್ಯಾಂಕ್ ಖಾತೆ ವಿವರಗಳನ್ನು ರೈತರು ಸಲ್ಲಿಸಬೇಕು' ಎಂದು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## 6 ಗಂಟೆಯಲ್ಲಿ ಮೃತರ ರಕ್ತದ ಮಾದರಿ ಸಂಗ್ರಹ

**ಬೆಂಗಳೂರು:** ಕೊರೊನಾ ಸೋಂಕು ಶಂಕಿತ ವ್ಯಕ್ತಿ ಮೃತಪಟ್ಟ6 ಗಂಟೆಯೊಳಗೆ ಅವರ ಗಂಟಲ ದ್ರವದ ಮಾದರಿ ಸಂಗ್ರಹಿಸಿ, ಕೋವಿಡ್ ಪರೀಕ್ಷೆ ಮಾಡಲಾಗುವುದು ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಇಲಾಖೆಯು ಜೂನ್ 8ರಂದು ಕೋವಿಡ್ ಪರೀಕ್ಷೆ ಸಂಬಂಧ ಪ್ರಕಟಿಸಿದ್ದ ಪರಿಷ್ಕೃತ ಮಾರ್ಗಸೂಚಿಯಲ್ಲಿ ಮೃತ ವ್ಯಕ್ತಿಗಳ ಕೋವಿಡ್ ಪರೀಕ್ಷೆಯ ಬಗ್ಗೆ ಉಲ್ಲೇಖಿಸಿರಲಿಲ್ಲ. ಈ ಬಗ್ಗೆ ಸ್ಪಷ್ಟನೆ ನೀಡಿರುವ ಇಲಾಖೆ, ತೀವ್ರ ಉಸಿರಾಟದ ಸಮಸ್ಯೆ (ಸಾರಿ) ಹಾಗೂ ಶೀತಜ್ವರ ಮಾದರಿಯ ಅನಾರೋಗ್ಯ ಸಮಸ್ಯೆಯಿಂದ (ಐಎಲ್‌ಐ) ಬಳಲಿ, ಮೃತ ವ್ಯಕ್ತಿಗಳಿಗೆ ಮೊದಲಿನಂತೆ ಕಡ್ಡಾಯವಾಗಿ ಕೋವಿಡ್ ಪರೀಕ್ಷೆ ಮಾಡಲಾಗುವುದು ಎಂದು ತಿಳಿಸಿದೆ.

ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯ (ಐಸಿಎಂಆರ್) ಪ್ರಕಾರ 'ಐಎಲ್‌ಐ' ಹಾಗೂ 'ಸಾರಿ' ಸಮಸ್ಯೆಯಿಂದ ಬಳಲುತ್ತಿದ್ದವರಿಗೆ ಹಾಗೂ ಮೃತಪಟ್ಟವರಿಗೆ ಕಡ್ಡಾಯ ಕೋವಿಡ್ ಪರೀಕ್ಷೆ ಮಾಡಬೇಕು. ವಿದೇಶ ಹಾಗೂ ಅನ್ಯರಾಜ್ಯಗಳಿಂದ ಬಂದವರಲ್ಲಿಯೂ ಈ ಮಾದರಿಯ ಅನಾರೋಗ್ಯ ಸಮಸ್ಯೆ ಕಂಡುಬಂದಲ್ಲಿ ಕೂಡಲೇ ಪರೀಕ್ಷೆ ಮಾಡಲಾಗುವುದು. ಅದೇ ರೀತಿ, ಕಂಟೈನ್‌ಮೆಂಟ್ ವಲಯ ಹಾಗೂ ಬಫರ್ ವಲಯದ ನಿವಾಸಿಗಳಿಗೂ ಇದು ಅನ್ವಯವಾಗಲಿದೆ ಎಂದು ಸ್ಪಷ್ಟಪಡಿಸಿದೆ.

# ಪಾಳಿ ಪದ್ಧತಿ ತರಗತಿಗೆ ಒಲವು

### ದೊಡ್ಡಬಳ್ಳಾಪುರ: ಶಾಲಾ ವ್ಯವಸ್ಥೆ ಸಂಬಂಧಿಸಿ ಶಿಕ್ಷಕ – ಪೋಷಕರ ಸಭೆ

ಪ್ರಜಾವಾಣಿ ವಾರ್ತೆ

**ದೊಡ್ಡಬಳ್ಳಾಪುರ:** ಕೊರೊನಾ ವೈರಸ್ ಸೋಂಕು ಹರಡುವುದನ್ನು ತಡೆಯಲು ಶಾಲೆಗಳನ್ನು ಹಂತ ಹಂತವಾಗಿ ಆರಂಭಿಸುವ ಕುರಿತಾಗಿ ಪೋಷಕರ ಹಾಗೂ ಶಾಲಾ ಅಭಿವೃದ್ಧಿ ಸಮಿತಿ ಸದಸ್ಯರ ಅಭಿಪ್ರಾಯಗಳನ್ನು ಪಡೆಯುವ ಸಲುವಾಗಿ ಬುಧವಾರ ತಾಲ್ಲೂಕಿನ ಸರ್ಕಾರಿ ಹಾಗೂ ಖಾಸಗಿ ಶಾಲೆಗಳಲ್ಲಿ ಪೋಷಕರ ಸಭೆಗಳನ್ನು ನಡೆಸಿ ಅಭಿಪ್ರಾಯಗಳನ್ನು ಸಂಗ್ರಹಿಸಲಾಯಿತು.

ಜುಲೈ 1 ರಂದು 4 ರಿಂದ 7ನೇ ತರಗತಿ, ಜುಲೈ 15 ರಿಂದ 1 ರಿಂದ 3ನೇ ತರಗತಿ ಹಾಗೂ 8ರಿಂದ 10ನೇ ತರಗತಿ ಹಾಗೂ ಪೂರ್ವ ಪ್ರಾಥಮಿಕ ಶಾಲೆಗಳನ್ನು ಜುಲೈ 20ರಿಂದ ತೆರೆಯುವಂತೆ ಶಿಕ್ಷಣ ಇಲಾಖೆ ಸೂಚಿಸಿರುವುದನ್ನು ಪೋಷಕರ ಗಮನಕ್ಕೆ ತಂದು ಅವರಿಂದ ಅಭಿಪ್ರಾಯಗಳನ್ನು ಪಡೆಯಲಾಯಿತು.

ಈ ದಿನಾಂಕಗಳನ್ನು ಹೊರತುಪಡಿಸಿ ಪೋಷಕರು ಸೂಚಿಸುವ ದಿನಾಂಕ, ಶಾಲೆಗಳಲ್ಲಿ ಅಂತರವನ್ನು ಕಾಯ್ದುಕೊಳ್ಳುವುದು, ಶಾಲಾ ಆರಂಭದ ದಿನಾಂಕ, ಮಕ್ಕಳು ಅಂತರ ಕಾಪಾಡಿಕೊಳ್ಳುವ ವ್ಯವಸ್ಥೆ ಮಾಡಿ ಅಥವಾ ಪಾಳಿ ಪದ್ಧತಿಯಲ್ಲಿ ಶಾಲೆ ಆರಂಭಿಸುವ ಕುರಿತು ಮತ್ತು ಶಾಲೆಗಳಲ್ಲಿ ಕೋವಿಡ್-19 ಸೋಂಕು ಹರಡದಂತೆ ಕೈಗೊಂಡಿರುವ ಸುರಕ್ಷತಾ ಕ್ರಮಗಳ ಬಗ್ಗೆ ಪೋಷಕರಿಗೆ ಮನವರಿಕೆ ಮಾಡಿ ಕೊಡಲಾಯಿತು.


ಉಪಪ್ರಾಂಶುಪಾಲ ಆರ್.ಮಹದೇವ್ ಪೋಷಕರ ಅಭಿಪ್ರಾಯ ಸಂಗ್ರಹಿಸಿದರು

'ಶಾಲೆಯು ಆಗಸ್ಟ್ 1ರಿಂದ ದಿನ ಬಿಟ್ಟು ದಿನ ಪದ್ಧತಿ ನಿರ್ವಹಿಸುವುದು ಉತ್ತಮ. ಮಕ್ಕಳಿಗೆ ನಾವೇ ಊಟ ಕಳುಹಿಸುತ್ತೇವೆ. ಆದರೆ ಶಾಲೆಯಲ್ಲಿ ಸ್ಯಾನಿಟೈಸರ್, ಥರ್ಮಲ್ ಸ್ಕ್ರೀನಿಂಗ್ ವ್ಯವಸ್ಥೆ ಮಾಡಿದರೆ ಅನುಕೂಲ. ಮಕ್ಕಳ ಹಿತದೃಷ್ಟಿಯಿಂದ ಶಾಲೆಯಲ್ಲಿ ಕೈಗೊಳ್ಳುವ ನಿರ್ಣಯಗಳಿಗೆ ನಮ್ಮ ಸಹಮತವಿದೆ' ಎಂದು ಪೋಷಕರಾದ ಲಲಿತಾ ಹೇಳಿದರು.

ನಗರದ ಸರ್ಕಾರಿ ಪದವಿಪೂರ್ವ ಕಾಲೇಜು ಪ್ರೌಢಶಾಲಾ ವಿಭಾಗದಲ್ಲಿ ನಡೆದ ಪೋಷಕರ ಸಭೆಯ ಕುರಿತು ಮಾಹಿತಿ ನೀಡಿದ ಉಪಪ್ರಾಂಶುಪಾಲ ಆರ್.ಮಹದೇವ್, 'ಶಾಲೆಯಲ್ಲಿ 750 ವಿದ್ಯಾರ್ಥಿಗಳಿದ್ದು, ಅಂತರ ಕಾಪಾಡಿಕೊಂಡು ಒಂದೇ ಬಾರಿ ನಡೆಸುವುದು ಕಷ್ಟವಾಗಲಿದೆ. ಈ ದಿಸೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ದಿನಕ್ಕೆ ಎರಡು ಪಾಳಿ ಪದ್ಧತಿಯಲ್ಲಿ ನಡೆಸುವುದು ಹಾಗೂ ಶಾಲೆಯ ಒಟ್ಟು ತರಗತಿಗಳನ್ನು ಎರಡು ವಿಭಾಗಗಳನ್ನಾಗಿ ವಿಂಗಡಿಸಿ, ದಿನ ಬಿಟ್ಟು ದಿನ ಶಾಲೆ ನಡೆಸುವ ಕುರಿತಾಗಿ ಪೋಷಕರ ಗಮನಕ್ಕೆ ತರಲಾಗಿದೆ. ಶಾಲೆಯಲ್ಲಿ ಬಿಸಿ ಊಟ ನೀಡದೇ, ಮಕ್ಕಳೇ ಮನೆಯಿಂದ ಊಟ ಮತ್ತು ನೀರು ತರಲು ಒಪ್ಪಿದ್ದಾರೆ' ಎಂದರು.

ಖಾಸಗಿ ಶಾಲೆಗಳಲ್ಲಿ ನಡೆದ ಪೋಷಕರ ಸಭೆಗಳಲ್ಲಿ ಆನ್‌ಲೈನ್ ಶಿಕ್ಷಣಕ್ಕೆ ಬಹಳಷ್ಟು ಪೋಷಕರಿಂದ ವಿರೋಧಗಳು ವ್ಯಕ್ತವಾಗಿವೆ. ಶಾಲೆಗಳು ದಿನ ಬಿಟ್ಟು ದಿನ ನಡೆಯುವುದರಿಂದ ಮಕ್ಕಳನ್ನು ನಿಭಾಯಿಸುವುದು ಕಷ್ಟ. ಹಾಗಾಗಿ ಪಾಳಿ ಪದ್ಧತಿಯಲ್ಲಿ ನಡೆಸುವುದು ಸೂಕ್ತ. ಪಠ್ಯಕ್ರಮವನ್ನು ಕಡಿಮೆ ಮಾಡುವ ಬದಲು ರಜಾದಿನಗಳಲ್ಲೂ ತರಗತಿಗಳನ್ನು ನಡೆಸುವುದು ಸೂಕ್ತ ಎನ್ನುವ ಅಭಿಪ್ರಾಯಗಳು ವ್ಯಕ್ತವಾದವು.

**ಮುಖ್ಯಾಂಶಗಳು**
- ಆನ್‌ಲೈನ್ ಶಿಕ್ಷಣಕ್ಕೆ ವಿರೋಧ
- ರಜಾದಿನದ ತರಗತಿಗೆ ಸಲಹೆ
- ಮನೆಯಲ್ಲೇ ಓದಲಿ: ಅಭಿಮತ

'ತಾಲ್ಲೂಕಿನಲ್ಲಿ ಶಾಲೆಗಳಲ್ಲಿ ಕೋವಿಡ್-19 ಹರಡದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು ಪೋಷಕರಿಗೆ ಶಾಲೆಯ ಬಗ್ಗೆ ವಿಶ್ವಾಸ ಹೆಚ್ಚಿಸಿ, ಹಂತ ಹಂತವಾಗಿ ಆರಂಭಿಸಲು ಸಿದ್ದತೆಗಳನ್ನು ಕೈಗೊಳ್ಳಲಾಗುತ್ತಿದೆ. ಪೋಷಕರ ಅಭಿಪ್ರಾಯಗಳನ್ನು ಶಾಲೆಯ ಮುಖ್ಯ ಶಿಕ್ಷಕರು ಇಲಾಖೆಯ ವೆಬ್‌ಸೈಟ್‌ನಲ್ಲಿ ಜೂನ್ 15ರ ಒಳಗೆ ಅಪ್‌ಲೋಡ್ ಮಾಡಲಿದ್ದಾರೆ. ಇದರ ಆಧಾರದ ಮೇಲೆ ಸರ್ಕಾರ ಕೈಗೊಳ್ಳುವ ತೀರ್ಮಾನದಂತೆ ಶಾಲೆ ಆರಂಭಿಸಲಾಗುತ್ತದೆ' ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಬೈಯಪ್ಪ ರೆಡ್ಡಿ ತಿಳಿಸಿದ್ದಾರೆ.

## ಸಾಲಕ್ಕಾಗಿ ಯುವಕನ ಜೀತ: ಬಿಡುಗಡೆ

ಪ್ರಜಾವಾಣಿ ವಾರ್ತೆ

**ನಾಗಮಂಗಲ:** ಮಾಂಸದಂಗಡಿ ಮಾಲೀಕನೊಬ್ಬ ಸಾಲ ನೀಡಿ, ಮರುಪಾವತಿ ಆಗುವವರೆಗೂ ಯುವಕನೊಬ್ಬನನ್ನು ಜೀತಕ್ಕೆ ಇಟ್ಟುಕೊಂಡಿದ್ದ ಪ್ರಕರಣ ಬೆಳ್ಳೂರು ಕ್ರಾಸ್‌ನಲ್ಲಿ ಬೆಳಕಿಗೆ ಬಂದಿದೆ.

ಈ ಕುರಿತು ಸಾರ್ವಜನಿಕರಿಂದ ದೂರು ಬಂದ ಪರಿಣಾಮ, ತಹಶೀಲ್ದಾರ್ ಕುಂಞ ಅಹಮದ್ ಅವರು ಬುಧವಾರ ದಾಳಿ ನಡೆಸಿ ಯುವಕನನ್ನು ರಕ್ಷಿಸಿ, ಅಂಗಡಿ ಮಾಲೀಕನ ವಿರುದ್ಧ ಪ್ರಕರಣ ದಾಖಲು ಮಾಡಿದ್ದಾರೆ.

ಶೇಖರ್ ಮಟನ್ ಸ್ಟಾಲ್ ಮಾಲೀಕ ಶೇಖರ್ 23 ವರ್ಷದ ಯುವಕನೊಬ್ಬನಿಗೆ ₹ 40 ಸಾವಿರ ಸಾಲ ನೀಡಿದ್ದ. ಜೀತ ಮಾಡಿ ಸಾಲ ತೀರಿಸುವಂತೆ ಯುವಕನನ್ನು ಅಂಗಡಿಯಲ್ಲೇ ಇಟ್ಟುಕೊಂಡಿದ್ದ. 8 ವರ್ಷಗಳಿಂದ ಕೆಲಸ ಮಾಡಿದ್ದರೂ ಸಾಲ ತೀರಿರಲಿಲ್ಲ. ಈ ಕುರಿತು ಜೀವಜ್ಯೋತಿ ಸಂಸ್ಥೆಯ ಸದಸ್ಯರು ತಹಶೀಲ್ದಾರ್‌ಗೆ ದೂರು ಕೊಟ್ಟಿದ್ದರು.


**ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ನಿಗಮ ನಿಯಮಿತ (ಚಾವಿಸನಿನಿ)**
(CIN No. U40109KA2004SGC035177)
ಅಧೀಕ್ಷಕ ಇಂಜಿನಿಯರ್ (ವಿ) ರವರ ಕಛೇರಿ, ಚಾ–ನಗರ ಮತ್ತು ಕೊಡಗು ವೃತ್ತ, ಶ್ರೀ ಹರ್ಷ ರಸ್ತೆ, ಮೈಸೂರು–570 001
ದೂರವಾಣಿ ಸಂಖ್ಯೆ: 0821–2420850, 2437058
**ಅಲ್ಪಾವಧಿ ಟೆಂಡರ್ ಪ್ರಕಟಣೆ**
[ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮುಖಾಂತರ]

ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ನಿಗಮ ನಿಯಮಿತ ಪರವಾಗಿ ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ ಚಾ–ನಗರ ಮತ್ತು ಕೊಡಗು, ರವರ ಅರ್ಹ ಏಜೆನ್ಸಿಯವರಿಂದ ಈ ಕೆಳಕಂಡ ಕೆಲಸಗಳಿಗೆ ಬಿಡ್‌ಗಳನ್ನು ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಆಹ್ವಾನಿಸಿರುತ್ತಾರೆ.

| Enquiry No. | Description of work | EMD |
|---|---|---|
| CESC/SEE/O&M/ EEE /AEE/ 20-21/MDK/VEH Dtd: 29.05.2020 | ಮಡಿಕೇರಿ ಕಾರ್ಯ ಮತ್ತು ಪಾಲನಾ ವಿಭಾಗ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿಭಾಗಾಧಿಕಾರಿ ಮತ್ತು ಎಲ್ಲಾ ಉಪ–ವಿಭಾಗಾಧಿಕಾರಿಗಳಿಗೆ ಒಂದು ವರ್ಷ ಅವಧಿಗೆ ಮಾಸಿಕ ಬಾಡಿಗೆ ಆಧಾರದ ಮೇಲೆ ಚಾಲಕ ಜೊತೆಗೆ ಮೋಟರ್ ವಾಹನ ಸೇವೆಯನ್ನು ಒದಗಿಸುವುದು. | 1,00,000/- |

ಬಿಡ್ ದಸ್ತಾವೇಜುಗಳನ್ನು 05–06–2020 ರಂದು ಅಥವಾ ನಂತರ "ಇ–ಪ್ರೊಕ್ಯೂರ್‌ಮೆಂಟ್" ವೆಬ್ ಸೈಟ್‌ನಲ್ಲಿ ಪಡೆಯಬಹುದಾಗಿದೆ. ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ವಿವರಗಳನ್ನು ಕರ್ನಾಟಕ ಸರ್ಕಾರ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://eproc.karnataka.gov.in ಅಥವಾ ಸಹಾಯ ವಾಣಿ 080–25501227/25501216 ಅಥವಾ ಇ–ಮೇಲ್ hphelpdesk.blr@intarvo.com ಮೂಲಕ ಪಡೆಯಬಹುದಾಗಿದೆ. ಅರ್ಹ ಬಿಡ್‌ದಾರರು ಇತರೆ ಯಾವುದೇ ವಿವರಗಳನ್ನು ಈ ಕೆಳಕಂಡ ಸಹಿದಾರರ ಕಛೇರಿಯಲ್ಲಿ ಪಡೆಯಬಹುದಾಗಿದೆ.

ಸಹಿ/– ಅಧೀಕ್ಷಕ ಇಂಜಿನಿಯರ್(ವಿ)
ಕಾ ಮತ್ತು ಪಾ ವೃತ್ತ, ಚಾ–ನಗರ ಮತ್ತು ಕೊಡಗು.


## ₹40 ಕೋಟಿ ಬಿಡುಗಡೆ

**ಬೆಂಗಳೂರು:** ಲಾಕ್‌ಡೌನ್ ಹಿನ್ನೆಲೆಯಲ್ಲಿ ಆಟೊರಿಕ್ಷಾ ಮತ್ತು ಟ್ಯಾಕ್ಸಿ ಚಾಲಕರ ಪರಿಹಾರ ಧನ ನೀಡಲು ರಾಜ್ಯ ಸರ್ಕಾರ ಹೆಚ್ಚುವರಿಯಾಗಿ ₹40 ಕೋಟಿ ಬಿಡುಗಡೆ ಮಾಡಿದೆ.

ಇದಕ್ಕಾಗಿ ಲೆಕ್ಕ ಶೀರ್ಷಿಕೆ ಇತರೆ ಖರ್ಚುಗಳಿಂದ ₹30.34 ಕೋಟಿ, ಪರಿಶಿಷ್ಟ ಜಾತಿ ಉಪ ಯೋಜನೆ ₹6.78 ಕೋಟಿ ಮತ್ತು ಗಿರಿಜನ ಉಪಯೋಜನೆಯಿಂದ ₹2.88 ಕೋಟಿ ಬಳಸಲಾಗಿದೆ. ಆಟೊ ಮತ್ತು ಟ್ಯಾಕ್ಸಿ ಚಾಲಕರಿಗೆ ಒಂದು ಬಾರಿ ಪರಿಹಾರವಾಗಿ ತಲಾ ₹5,000 ನೀಡಲಾಗುವುದು. ಹೆಚ್ಚುವರಿ ಅನುದಾನದ ಅಗತ್ಯವಿದ್ದರೆ, ಸಾದಿಲ್ವಾರು ನಿಧಿಯಿಂದ ಒದಗಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ರಾಜ್ಯ ಸರ್ಕಾರ ತಿಳಿಸಿದೆ.


**ಟೀಂಲೀಸ್ ಸರ್ವೀಸಸ್ ಲಿಮಿಟೆಡ್**
TeamLease® Putting India to Work
ನೋಂದಾಯಿತ ಕಚೇರಿ: 6ನೆಯ ಮಹಡಿ, ಬಿಎಂಟಿಸಿ ವಾಣಿಜ್ಯ ಸಂಕೀರ್ಣ, 80 ಅಡಿ ರಸ್ತೆ, ಕೋರಮಂಗಲ, ಬೆಂಗಳೂರು 560095.
CIN: L74140KA2000PLC118395
ಈ–ಮೇಲ್: corporateaffairs@teamlease.com ವೆಬ್‌ಸೈಟ್: www.teamleasegroup.com

**ಮಾರ್ಚ್ 31, 2020ಕ್ಕೆ ಕೊನೆಯಾದ ತ್ರೈಮಾಸಿಕ ಮತ್ತು ವರ್ಷಕ್ಕೆ ಪರಿಶೋಧಿತ ಆರ್ಥಿಕ ಫಲಿತಾಂಶಗಳ ಸಾರಾಂಶ**

(ಶೇರು ತಲಾವಾರು ದತ್ತವನ್ನು ಹೊರತುಪಡಿಸಿ ಉಳಿದ ಅಂಕಿಗಳು ಲಕ್ಷ ರೂಪಾಯಿಗಳಲ್ಲಿ)

| ವಿವರಗಳು | ಏಕಿಕೃತ | | | ಕ್ರೋಡೀಕೃತ | | |
|---|---|---|---|---|---|---|
| | 31.03.2020ಕ್ಕೆ ಕೊನೆಯಾದ 3 ತಿಂಗಳಿಗೆ | 31.03.2020ಕ್ಕೆ ಕೊನೆಯಾದ 12 ತಿಂಗಳಿಗೆ | 31.03.2019ಕ್ಕೆ ಕೊನೆಯಾದ 3 ತಿಂಗಳಿಗೆ | 31.03.2020ಕ್ಕೆ ಕೊನೆಯಾದ 3 ತಿಂಗಳಿಗೆ | 31.03.2020ಕ್ಕೆ ಕೊನೆಯಾದ 12 ತಿಂಗಳಿಗೆ | 31.03.2019ಕ್ಕೆ ಕೊನೆಯಾದ 3 ತಿಂಗಳಿಗೆ |
| | ಪರಿಶೋಧಿತ | ಪರಿಶೋಧಿತ | ಪರಿಶೋಧಿತ | ಪರಿಶೋಧಿತ | ಪರಿಶೋಧಿತ | ಪರಿಶೋಧಿತ |
| ಕಾರ್ಯಾಚರಣೆಗಳಿಂದ ಒಟ್ಟು ಆದಾಯ | 1,22,185.18 | 4,78,337.68 | 1,08,159.07 | 1,33,029.88 | 5,20,072.26 | 1,16,337.71 |
| ಸದರಿ ಅವಧಿಗೆ ತೆರಿಗೆಗೆ ಮುನ್ನ ನಿವ್ವಳ ಲಾಭ / (ನಷ್ಟ)* | 2,602.22 | 9,501.66 | 2,747.49 | 2,236.45 | 8,297.40 | 2,680.34 |
| ಸದರಿ ಅವಧಿಗೆ ತೆರಿಗೆಗೆ ನಂತರ ನಿವ್ವಳ ಲಾಭ / (ನಷ್ಟ)* | (2,870.88) | 4,158.20 | 2,714.62 | (2,943.06) | 3,497.53 | 2,602.30 |
| ಸದರಿ ಅವಧಿಗೆ ಒಟ್ಟು ಸಮಗ್ರವಾದ ಆದಾಯ [ಸದರಿ ಅವಧಿಗೆ ತೆರಿಗೆ ಕಳೆದ ನಂತರದ ಲಾಭ / (ನಷ್ಟ) ಸೇರಿದಂತೆ ಮತ್ತು ಇತರೆ ಸಮಗ್ರ ಆದಾಯ (ತೆರಿಗೆ ಕಳೆದು)] | (2,862.32) | 4,186.67 | 2,725.33 | (2,892.20) | 3,526.49 | 2,615.11 |
| ಪೇಯ್ಡ್–ಅಪ್ ಇಕ್ವಿಟಿ ಶೇರು ಬಂಡವಾಳ (ಮುಖ ಬೆಲೆ ತಲಾ 10 ರೂ.) | 1,709.68 | 1,709.68 | 1,709.68 | 1,709.68 | 1,709.68 | 1,709.68 |
| ಮೀಸಲುಗಳು (ಮರುಮೌಲ್ಯಮಾಪನ ಮೀಸಲುಗಳನ್ನು ಬಿಟ್ಟು) – ಹಿಂದಿನ ಲೆಕ್ಕ ವರ್ಷದ ಬ್ಯಾಲೆನ್ಸ್ ಷೀಟ್ ಪ್ರಕಾರ | 55,169.95 | 55,169.95 | 51,183.32 | 55,499.15 | 55,499.15 | 52,201.90 |
| ತಲಾ ಶೇರಿಗೆ ಗಳಿಕೆ (ಮುಖ ಬೆಲೆ ತಲಾ 10 ರೂ.) (ವಾರ್ಷಿಕಿಕರಣಗೊಂಡಿಲ್ಲ) | | | | | | |
| (ಎ) ಮೂಲ (ರೂ.) | (16.79) | 24.32 | 15.88 | (17.21) | 20.46 | 15.22 |
| (ಬಿ) ಡೈಲ್ಯೂಟೆಡ್ (ರೂ.) | (16.79) | 24.32 | 15.88 | (17.21) | 20.46 | 15.22 |

* ಮೇಲೆ ವರದಿ ಮಾಡಿರುವ ಅವಧಿಗಳಿಗೆ ಯಾವುದೇ ಅಸಾಮಾನ್ಯ ಮತ್ತು ಅಸಾಧಾರಣ ಐಟಂ ಇರಲಿಲ್ಲ.

ಮೇಲಿನ ಹೇಳಿಕೆಯು ಸ್ಟಾಕ್ ಎಕ್ಸ್‌ಚೇಂಜಿನಲ್ಲಿ ದಾಖಲಿಸಿರುವ, ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ವಿಧಾಯಕಗಳು, 2015ರ ("ವಿಧಾಯಕಗಳು") ವಿಧಾಯಕ 33ರ ಅಡಿಯಲ್ಲಿ ಪ್ರಕಟವಾಗಿರುವ, ಮಾರ್ಚ್ 31, 2020ಕ್ಕೆ ಕೊನೆಯಾದ ತ್ರೈಮಾಸಿಕ ಮತ್ತು ವರ್ಷದ ಪರಿಶೋಧಿತ ಆರ್ಥಿಕ ಫಲಿತಾಂಶಗಳ ಪೂರ್ಣ ರೂಪದ ಸಾರಾಂಶವಾಗಿದೆ. ಪರಿಶೋಧಿತ ಪ್ರತ್ಯೇಕಿತ ಮತ್ತು ಕ್ರೋಡೀಕೃತ ಆರ್ಥಿಕ ಫಲಿತಾಂಶಗಳ ಪೂರ್ಣ ರೂಪವು ಸ್ಟಾಕ್ ಎಕ್ಸ್‌ಚೇಂಜುಗಳ ವೆಬ್‌ಸೈಟುಗಳಲ್ಲಿ BSE ವೆಬ್‌ಸೈಟ್ (www.bseindia.com) ಮತ್ತು NSE ವೆಬ್‌ಸೈಟ್ (www.nseindia.com) ಮತ್ತು ಕಂಪನಿಯ ವೆಬ್‌ಸೈಟ್ (www.teamleasegroup.com) ನಲ್ಲಿ ಲಭ್ಯವಿದೆ.

ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ವಿಧಾಯಕಗಳು, 2015ರ ವಿಧಾಯಕ 33ರ ಪ್ರಕಾರ ಕಂಪನಿಯ ಮೇಲೆ ಹೇಳಿರುವ ಮಾರ್ಚ್ 31, 2020ಕ್ಕೆ ಕೊನೆಯಾದ ತ್ರೈಮಾಸಿಕ ಮತ್ತು ವರ್ಷದ ಕ್ರೋಡೀಕೃತ ಪರಿಶೋಧಿತ ಆರ್ಥಿಕ ಫಲಿತಾಂಶಗಳನ್ನು ಲೆಕ್ಕಪತ್ರ ಪರಿಶೋಧನಾ ಸಮಿತಿಯು ವಿಮರ್ಶಿಸಿದ್ದು, ಅದರ ಶಿಫಾರಸುಗಳನ್ನು ನಿರ್ದೇಶಕ ಮಂಡಲಿಯು 9ನೇ ಜೂನ್, 2020ರಂದು ನಡೆದ ತನ್ನ ಸಭೆಯಲ್ಲಿ ಅನುಮೋದಿಸಿದೆ. ಕಂಪನಿಯ ಶಾಸನಬದ್ಧ ಲೆಕ್ಕ ಪರಿಶೋಧಕರು, ಮಾರ್ಚ್ 31, 2020ಕ್ಕೆ ಕೊನೆಯಾದ ತ್ರೈಮಾಸಿಕ ಮತ್ತು ವರ್ಷದ ಆರ್ಥಿಕ ಫಲಿತಾಂಶಗಳ ಪರಿಶೋಧನೆ ಮಾಡಿದ್ದಾರೆ. ಸ್ವತಂತ್ರ ಲೆಕ್ಕಪರಿಶೋಧಕರಿಂದ ನೀಡಲ್ಪಟ್ಟ ಪ್ರತ್ಯೇಕಿತ ಮತ್ತು ಕ್ರೋಡೀಕೃತ ಫಲಿತಾಂಶಗಳ ಪರಿಮಿತ ಪರಿಶೀಲನಾ ವರದಿಯ ಗಮನವನ್ನು ಸೆಳೆಯಲಾಗುತ್ತಿದ್ದು, ವರದಿಯಲ್ಲಿ ಲೆಕ್ಕ ಪರಿಶೋಧಕರು ಒಂದು ವಿಷಯದ ಬಗ್ಗೆ ಅರ್ಹ ಅಭಿಪ್ರಾಯವನ್ನು ವರದಿ ಮಾಡಿದ್ದಾರೆ.

ಸದರಿ ಆರ್ಥಿಕ ಫಲಿತಾಂಶಗಳನ್ನು ಕಂಪನಿಗಳ ಅಧಿನಿಯಮ, 2013ರ 133ನೇ ಕಲಮಿನ ಅಡಿಯಲ್ಲಿ ಮತ್ತು ಅದರ ಅಡಿಯಲ್ಲಿ ಹೊರಡಿಸಿರುವ ಸಂಬಂಧಪಟ್ಟ ನಿಯಮಾವಳಿಗಳ ಜೊತೆ ಓದಿಕೊಂಡಂತೆ ನಿಗದಿಪಡಿಸಿರುವ, ಅನ್ವಯವಾಗುವ ಇಂಡಿಯನ್ ಅಕೌಂಟಿಂಗ್ ಸ್ಟ್ಯಾಂಡರ್ಡ್ಸ್ (IND-AS) ನಲ್ಲಿ ವಿಧಿಸಿರುವ ರೆಕಗ್ನಿಷನ್ ಮತ್ತು ಮೆಷರ್‌ಮೆಂಟ್ (ಪರಿಶೀಲನೆ ಮತ್ತು ಮಾಪನ) ತತ್ವಗಳ ಪ್ರಕಾರ ಸಿದ್ಧಪಡಿಸಲಾಗಿದೆ.

**ಟೀಂಲೀಸ್ ಸರ್ವೀಸಸ್ ಲಿಮಿಟೆಡ್ ನಿರ್ದೇಶಕ ಮಂಡಲಿಗಾಗಿ ಮತ್ತು ಅದರ ಪರವಾಗಿ**
**ಸಹಿ/– ಅಶೋಕ್ ಕುಮಾರ್ ನೆಡುರುಮಲ್ಲಿ**
ವ್ಯವಸ್ಥಾಪಕ ನಿರ್ದೇಶಕರು
DIN: 00151814

**ದಿನಾಂಕ**: 9ನೇ ಜೂನ್, 2020
**ಸ್ಥಳ**: ಬೆಂಗಳೂರು


# ಬಡವಾದ ಕಾರ್ಮಿಕ ವರ್ಗದ ದನಿ

• ಡಿ.ಎ.ವಿಜಯ ಭಾಸ್ಕರ್

**ಬೆಂಗಳೂರು:** ಕಮ್ಯುನಿಸ್ಟ್ ಚಳವಳಿಯ ಸಂಗಾತಿಗಳ ಮಧ್ಯೆ ಕಾಮ್ರೇಡ್ ಎಂಸಿಎನ್ ಎಂದೇ ಚಿರಪರಿಚಿತರಾಗಿದ್ದ ಎಂ.ಸಿ. ನರಸಿಂಹನ್ ವಿದ್ಯಾರ್ಥಿ ದೆಸೆಯಿಂದಲೇ ಶೋಷಣೆಯ ವಿರುದ್ಧ ಹೋರಾಟ ನಡೆಸಿ ಸಮಾಜವಾದಿ ಸಮಾಜ ನಿರ್ಮಾಣದ ಕನಸು ಕಂಡವರು.

1942ರ ಸಂದರ್ಭದಲ್ಲಿ ಎಂಜಿನಿಯರಿಂಗ್ ವಿದ್ಯಾರ್ಥಿಯಾಗಿದ್ದ ಅವರು ಎಂಜಿನಿಯರಿಂಗ್ ಶಿಕ್ಷಣವನ್ನು ಕೊನೆ ವರ್ಷದಲ್ಲಿ ಕೈಬಿಟ್ಟು ಭಾರತ ಕಮ್ಯುನಿಸ್ಟ್ ಪಕ್ಷದ (ಸಿಪಿಐ) ಪೂರ್ಣಾವಧಿ ಕಾರ್ಯಕರ್ತರಾಗಿ ಕೋಲಾರದ ಚಿನ್ನದ ಗಣಿ ಕಾರ್ಮಿಕರನ್ನು ಸಂಘಟಿಸಲು ಕೆಜಿಎಫ್‌ಗೆ ತೆರಳಿದರು.

ನಂತರ ಹಲವಾರು ಹೋರಾಟಗಳ ಮೂಲಕ ಕಾರ್ಮಿಕ ನಾಯಕರಾಗಿ ಬೆಳೆದ ಅವರು, 1957ರಲ್ಲಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಯಾಗಿ ಕೆಜಿಎಫ್ ಕ್ಷೇತ್ರದಿಂದ ಮೈಸೂರು ವಿಧಾನಸಭೆಗೆ ಚುನಾಯಿತರಾದರು.

1962ರ ಚೀನಾ ಮಹಾಯುದ್ಧದ ಸಂದರ್ಭದಲ್ಲಿ ಜೈಲುವಾಸ ಅನುಭವಿಸಿದ ಅವರು 1962ರಿಂದ 1967ರವರೆಗೂ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು.

ಶಾಸನ ಸಭೆಗಳಲ್ಲಿ ದುಡಿಯುವ ಜನರ ಧ್ವನಿಯಾಗಿದ್ದ ಅವರು ರೈತ-ಕಾರ್ಮಿಕರ ಹಿತಾಸಕ್ತಿಯನ್ನು ಪರಿಣಾಮಕಾರಿಯಾಗಿ ಪ್ರತಿನಿಧಿಸಿದ್ದರು. ತದನಂತರ ಮದ್ರಾಸ್ ವಿಶ್ವವಿದ್ಯಾನಿಲಯದ ಕಾನೂನು ವಿದ್ಯಾರ್ಥಿಯಾಗಿ ಉನ್ನತ ಶ್ರೇಣಿಯಲ್ಲಿ ಕಾನೂನು ಪದವಿ ಪಡೆದ ಅವರು ರಾಜ್ಯದ ಸಮರ್ಥ ವಕೀಲರಾಗಿ ಕಾನೂನು ಸಮರದಲ್ಲಿ ಕಾರ್ಮಿಕ ವರ್ಗದ ಪರ ಕಾನೂನು ಹೋರಾಟ ನಡೆಸಿದರು.

ರಾಜ್ಯ ಹೈಕೋರ್ಟ್‌ನ ನ್ಯಾಯಮೂರ್ತಿಯಾಗುವ ಅವಕಾಶವನ್ನು ಎರಡು ಬಾರಿ ವಿನಯವಾಗಿಯೇ ನಿರಾಕರಿಸಿದ್ದರು.

ಕಳೆದ 2-3 ವರ್ಷಗಳ ಹಿಂದೆ ತೀವ್ರ ಅನಾರೋಗ್ಯಕ್ಕೆ ತುತ್ತಾಗುವವರೆಗೂ ಕಾರ್ಮಿಕರ ಪರವಾದ ಕೇಸುಗಳನ್ನು ನಡೆಸಿದರು.

ಸಂವಿಧಾನದ ಪ್ರಬಲ ಸಮರ್ಥಕರಾಗಿ ಸಾಂವಿಧಾನಿಕ ಕಾನೂನಿನ ಉತ್ಕೃಷ್ಟ ಪಂಡಿತರಾಗಿ ಹಲವಾರು ಪ್ರಕರಣಗಳಲ್ಲಿ ಕಾರ್ಮಿಕರ ಪರ ಕಾನೂನು ರಚನೆಯಾಗಲು ನ್ಯಾಯಾಲಯಗಳಲ್ಲಿ ಶ್ರಮಿಸಿದ ಕೀರ್ತಿ ನರಸಿಂಹನ್ ಅವರಿಗೆ ಸಲ್ಲುತ್ತದೆ.


'ರಾಜಪ್ಪ ವಿರುದ್ಧ ಬೆಂಗಳೂರು ಜಲಮಂಡಳಿ' ಪ್ರಕರಣದಲ್ಲಿ ಕೈಗಾರಿಕೆಯ ವಿಸ್ತೃತ ವ್ಯಾಖ್ಯಾನ ನೀಡುವುದರೊಂದಿಗೆ ಎಲ್ಲ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿರುವ ಕಾರ್ಮಿಕರಿಗೆ ನ್ಯಾಯ ನೀಡಿಕೆಯಲ್ಲಿ ಒಂದು ಕ್ರಾಂತಿಕಾರಿಯಾದ ಚರಿತ್ರೆಯನ್ನೇ ನಿರ್ಮಿಸಿದ ಶ್ರೇಯಸ್ಸು ಅವರದ್ದು.

ಕನಿಷ್ಠ ಕೂಲಿ ವಿಷಯದಲ್ಲಿ ಆಳವಾದ ಅಧ್ಯಯನ ಮಾಡಿದ್ದ ಅವರು ರಾಷ್ಟ್ರ ಮಟ್ಟದಲ್ಲಿ ಹಾಗೂ ರಾಜ್ಯ ಮಟ್ಟದಲ್ಲಿ ಅಸಂಘಟಿತ ವಲಯದ ಕಾರ್ಮಿಕರ ಬದುಕಿಗೆ ಬೆಳಕಾಗಿದ್ದರು. ಕಾರ್ಮಿಕ ಕಾನೂನಿನ ಕ್ಷೇತ್ರಕ್ಕೆ, ಕಾರ್ಮಿಕ ಚಳುವಳಿಗೆ ಕಾಮ್ರೇಡ್ ಎಂ.ಸಿ. ಎನ್. ಅವರ ಕೊಡುಗೆ ಅನನ್ಯವಾದುದು.

ಕಾರ್ಮಿಕರ ಧ್ವನಿ ಕ್ಷೀಣವಾಗಿರುವ ಇಂದಿನ ದಿನಗಳಲ್ಲಿ ಎಂ.ಸಿ.ಎನ್ ಅವರಂತಹ ಕಾರ್ಮಿಕ ವರ್ಗದ ಪಕ್ಷಪಾತಿಯ ನಿಧನದಿಂದ ಕಾರ್ಮಿಕ ವರ್ಗ ಇನ್ನಷ್ಟು ಬಡವಾಗಿದೆ ಎಂದೇ ಅನಿಸುತ್ತಿದೆ.

(ಲೇಖಕರು ಪ್ರಧಾನ ಕಾರ್ಯದರ್ಶಿ, ಎಐಟಿಯುಸಿ)

### ಎಂ.ಸಿ. ನರಸಿಂಹನ್ ನಿಧನ



**ಬೆಂಗಳೂರು:** ಕಮ್ಯುನಿಸ್ಟ್ ಪಕ್ಷದ ಹಿರಿಯ ನಾಯಕರು, ಸ್ವಾತಂತ್ರ್ಯ ಹೋರಾಟಗಾರರು, ಹಿರಿಯ ಕಾರ್ಮಿಕ ಮುಖಂಡರು, ಮಾಜಿ ಶಾಸಕರು ಹಾಗೂ ರಾಜ್ಯ ಹೈಕೋರ್ಟ್‌ನ ಹಿರಿಯ ವಕೀಲರೂ ಆಗಿದ್ದ ಕಾಮ್ರೇಡ್ ಎಂ.ಸಿ. ನರಸಿಂಹನ್(98) ಬುಧವಾರ ಸಂಜೆ 5 ಗಂಟೆಗೆ ನಿಧನರಾದರು.

ಬಸವೇಶ್ವರ ನಗರದ ಶಾರದಾ ಕಾಲೋನಿಯ ನಿವಾಸದಲ್ಲಿ ಹೃದಯಾಘಾತದಿಂದ ನಿಧನರಾದರು ಎಂದು ಅವರ ಕುಟುಂಬದ ಮೂಲಗಳು ತಿಳಿಸಿವೆ. ಅವರಿಗೆ ಮೂವರು ಪುತ್ರಿಯರಿದ್ದಾರೆ.

ಅಂತ್ಯಕ್ರಿಯೆ ಗುರುವಾರ ಬೆಳಗ್ಗೆ 10.30ಕ್ಕೆ ಹರಿಶ್ಚಂದ್ರ ಘಾಟ್‌ನಲ್ಲಿ ನಡೆಯಲಿದೆ. ಕುಟುಂಬದವರ ಸಂಪರ್ಕ ಫೋನ್ ನಂಬರ್ 94483-37640.

# ಎಪಿಎಂಸಿ ಹುದ್ದೆಗೆ ಬಿರುಸಿನ ಪೈಪೋಟಿ

ಪ್ರಜಾವಾಣಿ ವಾರ್ತೆ

**ದೊಡ್ಡಬಳ್ಳಾಪುರ:** ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ(ಎಪಿಎಂಸಿ) ಆಡಳಿತ ಮಂಡಳಿಯ ಎರಡನೇ ಅವಧಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಗೆ ಚುನಾವಣೆ ಜೂನ್ 19ಕ್ಕೆ ನಿಗದಿಯಾಗಿದೆ.


13 ಜನ ನಿರ್ದೇಶಕರನ್ನು ಹೊಂದಿರುವ ಎಪಿಎಂಸಿಯಲ್ಲಿ ಕಾಂಗ್ರೆಸ್ 7, ಜೆಡಿಎಸ್ 6 ಸ್ಥಾನಗಳನ್ನು ಹೊಂದಿವೆ. ಸರ್ಕಾರದಿಂದ ನಾಮ ನಿರ್ದೇಶನ ಹೊಂದುವ 3 ಸ್ಥಾನಗಳ ಪೈಕಿ 1 ಸ್ಥಾನಕ್ಕೆ ಮೂರು ದಿನಗಳ ಹಿಂದೆಯಷ್ಟೇ ಎಂ.ಸಿದ್ದಲಿಂಗಯ್ಯ ನಾಮ ನಿರ್ದೇಶನಗೊಂಡಿದ್ದಾರೆ. ಉಳಿದ 2 ಸ್ಥಾನಗಳು ಖಾಲಿ ಉಳಿದಿವೆ. ಚುನಾವಣೆ ಒಂದು ದಿನ ಇರುವಂತೆಯೂ ಸರ್ಕಾರ ನಾಮ ನಿರ್ದೇಶನ ಮಾಡಲು ಅವಕಾಶ ಇದೆ.

ದೊಡ್ಡಬಳ್ಳಾಪುರ, ನೆಲಮಂಗಲ ಹಾಗೂ ದೇವನಹಳ್ಳಿ ತಾಲ್ಲೂಕನ್ನು ಒಳಗೊಂಡಿರುವ ಎಪಿಎಂಸಿಯಲ್ಲಿ ದೊಡ್ಡಬಳ್ಳಾಪುರದಿಂದ 5 ಜನ, ದೇವನಹಳ್ಳಿ ತಾಲ್ಲೂಕಿನಿಂದ 2 ಜನ ಕಾಂಗ್ರೆಸ್ ಪಕ್ಷದಿಂದ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ. ಹಾಗೆಯೇ ಜೆಡಿಎಸ್ ಪಕ್ಷದಿಂದ ದೊಡ್ಡಬಳ್ಳಾಪುರ 2, ನೆಲಮಂಗಲ 3 ಹಾಗೂ ದೇವನಹಳ್ಳಿ ತಾಲ್ಲೂಕಿನಿಂದ ಒಬ್ಬ ನಿರ್ದೇಶಕರು ಆಯ್ಕೆಯಾಗಿದ್ದಾರೆ.

ಹಾಲಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನವನ್ನು ದೇವನಹಳ್ಳಿ ತಾಲ್ಲೂಕಿಗೆ ನೀಡಲಾಗಿದೆ. ಹೀಗಾಗಿ ಎರಡನೇ ಅವಧಿಯ ಅಧ್ಯಕ್ಷ, ಉಪಾಧ್ಯಕ್ಷ ಎರಡೂ ಸ್ಥಾನಗಳನ್ನು ದೊಡ್ಡಬಳ್ಳಾಪುರ ತಾಲ್ಲೂಕಿಗೆ ನೀಡಬೇಕು ಎಂದು ಎರಡೂ ಪಕ್ಷದ ಮುಖಂಡರು ಹೈಕಮಾಂಡ್ ಮೇಲೆ ಒತ್ತಡ ಹೇರುತಿದ್ದಾರೆ.


ಬಿ.ವಿ.ಲೋಕೇಶ್


ವಿಶ್ವನಾಥರೆಡ್ಡಿ


ಎಂ.ಗೋವಿಂದರಾಜು


ಕೆ.ವಿ.ಮಂಜುನಾಥ್

ಎರಡನೇ ಅವಧಿಯ 20 ತಿಂಗಳ ಆಡಳಿತಕ್ಕಾಗಿ ಅಧ್ಯಕ್ಷ ಸ್ಥಾನಕ್ಕೆ ಜೆಡಿಎಸ್ ಪಕ್ಷದಿಂದ ಬಿ.ವಿ.ಲೋಕೇಶ್, ಕಾಂಗ್ರೆಸ್ ಪಕ್ಷದಿಂದ ಎಂ.ಗೋವಿಂದರಾಜ್, ವಿಶ್ವನಾಥರೆಡ್ಡಿ ಹಾಗೂ ಹಾಲಿ ಅಧ್ಯಕ್ಷರಾಗಿರುವ ಕೆ.ವಿ.ಮಂಜುನಾಥ್ ಸಹ ಆಕಾಂಕ್ಷಿಗಳಾಗಿದ್ದಾರೆ.

**ನಾಮಿನಿ ನಿರ್ದೇಶಕರೇ ನಿರ್ಣಾಯಕ:** ಕಾಂಗ್ರೆಸ್ ಪಕ್ಷಕ್ಕೆ ಒಂದು ಸ್ಥಾನ ಹೆಚ್ಚಾಗಿದ್ದರು ಸಹ ಸರ್ಕಾರದಿಂದ ನಾಮ ನಿರ್ದೇಶನಗೊಳ್ಳುವ ನಿರ್ದೇಶಕರ ಮತಗಳೇ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಯಲ್ಲಿ ನಿರ್ಣಾಯಕವಾಗಲಿವೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಆಡಳಿತದಲ್ಲಿ ಇರುವುದರಿಂದ ಸರ್ಕಾರದಿಂದ ನಾಮ ನಿರ್ದೇಶನಗೊಳ್ಳುವವರು ಸಹಜವಾಗಿಯೇ ಬಿಜೆಪಿ ಪಕ್ಷದವರೇ ಆಗಿರುತ್ತಾರೆ. ಈಗ ಒಂದು ಸ್ಥಾನಕ್ಕೆ ನಾಮ ನಿರ್ದೇಶಕರಾಗಿರುವ ಎಂ.ಸಿದ್ದಲಿಂಗಯ್ಯ ಅವರೂ ಬಿಜೆಪಿ ಅಭ್ಯರ್ಥಿ.